ಬಾಲಹನುಮನ ಕಣ್ಣಿಗೆ ಸೂರ್ಯ ಆಕರ್ಷಕ ಹಣ್ಣಾಗಿ ಕಾಣಿಸಿದಂತೆ, ಮನುಕುಲದ ಪಾಲಿಗೆ ಮಂಗಳಗ್ರಹ ಬಗೆಹರಿಯದ ಒಗಟು. ಭೂಮಿಯಂತೆ ಮಂಗಳನ ಅಂಗಳದ ಪರಿಸರವೂ ಜೀವಯೋಗ್ಯ ಆಗಿರಬಹುದೆನ್ನುವ ಲೆಕ್ಕಾಚಾರ ಮಂಗಳನತ್ತ ಮತ್ತೆ ಮತ್ತೆ ಕಣ್ಣುಹರಿಸಲು ಕಾರಣವಾಗಿದೆ. ಕಳೆದ ಐದು ದಶಕಗಳಲ್ಲಿ ಮತ್ತೆ ಮತ್ತೆ ಮಂಗಳನತ್ತ ಮನುಷ್ಯನ ಯಾಂತ್ರಿಕ ಪ್ರತಿನಿಧಿಗಳು ಪ್ರಯಾಣ ಬೆಳೆಸಿದ್ದರೂ, ಆ ಯಾನದಲ್ಲಿ ಮಂಗಳನ ಬಗ್ಗೆ ಕುತೂಹಲವನ್ನು ಹೆಚ್ಚಿಸಿವೆಯೇ ಹೊರತು, ಅಂಗಾರಕನ ಅಂತರಂಗ ಅರಿಯುವುದು ಸಾಧ್ಯವಾಗಿಲ್ಲ. ಈಗ, ಇಡೀ ಜಗತ್ತು ಕೊರೊನಾ ವೈರಾಣುವಿನ ಬಗ್ಗೆ ತಲೆ ಕೆಡಿಸಿಕೊಂಡಿರುವ ಸಂದರ್ಭದಲ್ಲಿ, ವೈರಾಣುವಿನ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ಪರಸ್ಪರ ಕೆಂಗಣ್ಣು ಬೀರುತ್ತಿರುವ ಅಮೆರಿಕ ಮತ್ತು ಚೀನಾಗಳು ಮಂಗಳ ಗ್ರಹದ ಅನ್ವೇಷಣೆಗೆ ತಮ್ಮ ನೌಕೆಗಳನ್ನು ಹಾರಿಬಿಟ್ಟಿವೆ. ಈ ನೌಕೆಗಳ ಜೊತೆಗೆ, ತನ್ನದೂ ಒಂದಿರಲಿ ಎನ್ನುವಂತೆ ಯುಎಇ ಕೂಡ ನೌಕೆಯೊಂದನ್ನು ಕಳುಹಿಸಿದೆ. ಈ ಮೂರೂ ದೇಶಗಳ ಬಾಹ್ಯಾಕಾಶ ಸಾಹಸದಲ್ಲಿ ‘ಮಂಗಳನ ಹೃದಯ’ ಮನುಕುಲಕ್ಕೆ ಕೊಂಚವಾದರೂ ಅರ್ಥವಾದೀತೆ?



## ಮಂಗಳ ಗ್ರಹ ಅನ್ವೇಷಣೆ: ಮೂರೂ ನಿಟ್ಟಿನಿಂದ...

# ಮಂಗಳನತ್ತ ಮೂರು ಕಣ್ಣು!